ಇವುಗಳ ಸಂಗ್ರಹ ಮತ್ತು ಸಂರಕ್ಷಣೆ ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಮಹತ್ವವಾದುದು.

ಹಸ್ತಪ್ರತಿಗಳು ಮತ್ತು ತಾಡೋಲೆಗಳ ಸಂಗ್ರಹ, ಸಂಪಾದನೆ ಹಾಗೂ ಸಂರಕ್ಷಣೆಯ ಜೊತೆಗೆ ಅವುಗಳ ಸಂಶೋಧನೆ ಹಾಗೂ ಅಧ್ಯಯನಕ್ಕೂ ಪ್ರತಿಷ್ಠಾನದಲ್ಲಿ ಅವಕಾಶವಿದೆ. 1988ರಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಆರಂಭವಾದ ಪ್ರತಿಷ್ಠಾನಕ್ಕೆ 'ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ' ಎನ್ನುವ ಅರ್ಥಪೂರ್ಣ ಹೆಸರನ್ನು ಸೂಚಿಸಿದವರು ರಾಷ್ಟ್ರಕವಿ ಕುವೆಂಪು.

ವೇದಗಳು, ಉಪನಿಷತ್ತು, ಆಗಮಗಳು, ಜೋತಿಷ್ಯ, ಇತಿಹಾಸ, ಪ್ರಾಚೀನ ವಾರ್ತಾಪತ್ರಿಕೆಗಳು, ನಾಟಕ, ಪಂಚಾಂಗಗಳು, ನಿಘಂಟು, ವ್ಯಾಕರಣ, ವೈದ್ಯಕೀಯ ಸೇರಿದಂತೆ ವಿವಿಧ ಕ್ಷೇತ್ರಗಳ ಅಪೂರ್ವ ಕೃತಿಗಳು ಗ್ರಂಥಾಲಯದಲ್ಲಿವೆ. ಹಸ್ತಪ್ರತಿಗಳು ಮತ್ತು ಅಮೂಲ್ಯ ಗ್ರಂಥಗಳನ್ನು ಇಲ್ಲಿ ವರ್ಗೀಕರಿಸಿ ವೈಜ್ಞಾನಿಕ ರೀತಿಯಲ್ಲಿ ಸಂರಕ್ಷಿಸಿ ಇಡಲಾಗಿದೆ. ಹಸ್ತಪ್ರತಿಗಳನ್ನು ಸ್ಕ್ಯಾನಿಂಗ್ (ಬಿಂಬಗ್ರಹಣ) ಮತ್ತು ಡಿಜಿಟಲೈಸೇಶನ್ (ಅಂಕಿಯ ಪರಿವರ್ತನೆ) ಮೂಲಕ ಉತ್ತಮ ಗುಣಮಟ್ಟ ಹಾಗೂ ಹೆಚ್ಚು ಸಾಮರ್ಥ್ಯವನ್ನು ಅಡಕಗೊಳಿಸಬಲ್ಲ ಸರ್ವರ್ ಯಂತ್ರದ ಮೂಲಕ ಶಾಶ್ವತವಾಗಿ ಸಂರಕ್ಷಿಸುವ ಕಾರ್ಯ ನಡೆಯುತ್ತಿದೆ. ಕೀರ್ತಿಶೇಷ ಮಂಜಯ್ಯ ಹೆಗ್ಗಡೆಯವರು ಸಂಗ್ರಹಿಸಿ, ಸಂರಕ್ಷಿಸಿದ 421 ಪುಸ್ತಕಗಳು ಹಾಗೂ ವರ್ಣಚಿತ್ರಗಳ ಸಂಗ್ರಹವನ್ನೂ ಇಲ್ಲಿ ಕಾಣಬಹುದು.

ಪ್ರತಿಷ್ಠಾನದ ಸಂಗ್ರಹದಲ್ಲಿ ಧರ್ಮಸ್ಥಳದ ವಿವಿಧ ಕಾರ್ಯಕ್ರಮಗಳು, ಹೆಗ್ಗಡೆಯವರು ಹಾಗೂ ಕುಟುಂಬದವರಿಗೆ ಸಂಬಂಧಿಸಿದ ಸುಮಾರು ಒಂದು ಲಕ್ಷಕ್ಕೂ ಅಧಿಕ ಆಕರ್ಷಕ ಛಾಯಾಚಿತ್ರಗಳ ಅಪೂರ್ವ ಸಂಗ್ರಹವಿದೆ.

ಗ್ರಂಥಾಲಯದಲ್ಲಿ 4,707 ತಾಡೋಲೆ ಹಸ್ತಪ್ರತಿಗಳು, 1468 ಕಾಗದದ ಹಸ್ತಪ್ರತಿಗಳು, 302 ಕಲ್ಲಚ್ಚಿನ ಪ್ರತಿಗಳು ಹಾಗೂ ಹಸ್ತಪ್ರತಿಗಳು ಮತ್ತು ವಿವಿಧ ಭಾಷೆಗಳ 25,637 ಮುದ್ರಿತ ಪುಸ್ತಕಗಳಿವೆ. ಕನ್ನಡ, ಇಂಗ್ಲಿಷ್, ಸಂಸ್ಕೃತ, ತುಳು, ಮರಾಠಿ, ತೆಲುಗು, ಪ್ರಾಕೃತ, ಪಾಲಿ ಭಾಷೆಯಲ್ಲಿ ರಚಿಸಿದ ಕೃತಿಗಳಿವೆ. ವಿವಿಧ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳು, ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಇಲ್ಲಿ ಬಂದು ತಮ್ಮ ಅಧ್ಯಯನ ಮತ್ತು ಸಂಶೋಧನೆಗೆ ಗ್ರಂಥಾಲಯದ ಸದುಪಯೋಗ ಪಡೆಯುತ್ತಾರೆ.

ರಷ್ಯಾದ ವಿಜ್ಞಾನ ಅಕಾಡೆಮಿಯ ಡಾ. ಶ್ವೇತನಿ ರಜಕೋವ, ನವದೆಹಲಿಯ ಸಂಸ್ಕೃತಿ ಇಲಾಖೆಯ ನಿರ್ದೇಶಕ ಪ್ರತಾಪಾನಂದ, ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಡಾ. ಜಯಕುಮಾರ್ ಉಪಾಧ್ಯೆ, ಲಕ್ನೋ ವೈದ್ಯಕೀಯ ವಿಶ್ವವಿದ್ಯಾಲಯದ ಡಾ. ಸಂದೀಪ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ವಿವೇಕ ರೈ, ಜಾನಪದ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಕೆ. ಚಿನ್ನಪ್ಪ ಗೌಡ ಮೊದಲಾದವರು ಗ್ರಂಥಾಲಯಕ್ಕೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

ಹಸ್ತಪ್ರತಿಗಳು, ತಾಳೆಗರಿ ಮತ್ತು ಅಮೂಲ್ಯ ಗ್ರಂಥಗಳ ಸಂಗ್ರಹ ಹಾಗೂ ಸಂರಕ್ಷಣೆ ಮಾತ್ರವಲ್ಲದೆ, ನಾಡಿನ ವಿವಿಧ ಮಠಮಂದಿರಗಳು, ಪ್ರಾಚೀನ ಅರಮನೆಗಳು ಮತ್ತು ಮನೆಗಳಲ್ಲಿರುವ ಅಮೂಲ್ಯ ಹಸ್ತಪ್ರತಿಗಳು ಮತ್ತು ಗ್ರಂಥಗಳ ರಕ್ಷಣಾ ಕಾರ್ಯಕ್ಕೆ ಪ್ರತಿಷ್ಠಾನ ಸಹಕಾರ ನೀಡುತ್ತಿದೆ. ಪ್ರತಿಷ್ಠಾನದಲ್ಲಿ ಕಳೆದ 28 ವರ್ಷಗಳಿಂದ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಅಧ್ಯಯನ ಹಾಗೂ ಗ್ರಂಥ ಸಂಪಾದನೆ ಕಾರ್ಯ ನಿರಂತರವಾಗಿ ನಡೆಯುತ್ತಿದೆ.

ಸರ್ವಧರ್ಮ ಸಮನ್ವಯ ಕೇಂದ್ರವಾದ ಧರ್ಮಸ್ಥಳದಲ್ಲಿ ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಆರೋಗ್ಯ, ಗ್ರಾಮಾಭಿವೃದ್ಧಿಗೆ ಉತ್ತಮ ಕಾಯಕಲ್ಪ ನೀಡಲಾಗುತ್ತಿದೆ. ವೈಯಕ್ತಿಕ ನೆಲೆಯಲ್ಲಿರುವ 'ಪ್ರಾಚ್ಯ ವಿದ್ಯಾ ಸಂಶೋಧನ ಕೇಂದ್ರ'ವು ಇಂದು ದೇಶವಿದೇಶಗಳ ಸಂಶೋಧಕರು, ಪ್ರಾಧ್ಯಾಪಕರು, ವಿದ್ವಾಂಸರು ಹಾಗೂ ವಿದ್ಯಾರ್ಥಿಗಳ ಅಧ್ಯಯನ ಕೇಂದ್ರವಾಗಿ ಬೆಳೆಯುತ್ತಿದೆ, ಬೆಳಗುತ್ತಿದೆ. ದೇಶದ ಅಕ್ಷರ ಲಿಪಿ ಸಂಸ್ಕೃತಿಯ ಮುಖ್ಯ ಭಾಗ ಇಲ್ಲಿ ಸಂರಕ್ಷಿತವಾಗಿದೆ.

ಗ್ರಂಥಾಲಯವನ್ನು 'ಮಂಜೂಷಾ ವಸ್ತು ಸಂಗ್ರಾಹಲಯ'ದ ಬಳಿ ಇರುವ ವಿಸ್ತೃತ ಕಟ್ಟಡಕ್ಕೆ ಇತ್ತೀಚೆಗೆ ಸ್ಥಳಾಂತರಿಸಲಾಗಿದೆ. ಆಸಕ್ತರಿಗೆ ವೀಕ್ಷಣೆ, ಅಧ್ಯಯನ ಹಾಗೂ ಸಂಶೋಧನೆಗೆ ಬೇಕಾದ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in




ನಿರಂತರ ಸದೃಢ ಆರೋಗ್ಯಕ್ಕಾಗಿ

SDM™ AYURVEDA PHARMACY

ಅಷ್ಟವರ್ಗಯುಕ್ತ
ಚ್ಯವನಪ್ರಾಶ ಲೇಹ

CHYAVANAPRASHA LEHA

ಹಸಿ ನೆಲ್ಲಿಕಾಯಿ ಯಿಂದಲೇ ತಯಾರಿಸಿದೆ.

ರೋಗ ನಿರೋಧಕ ಶಕ್ತಿ ಹೆಚ್ಚಿಸಲು
ವೃದ್ಧಾಪ್ಯದ ಆರೋಗ್ಯ ಸಮಸ್ಯೆ
ಮಕ್ಕಳ ಬೆಳವಣಿಗೆ

SDM
ಆಯುಷ್ ಕ್ವಾಥ
ಮನೆಯಲ್ಲಿ ಇರಲೇಬೇಕಾದ ಆಯ್ದ ಮೂಲಿಕೆಗಳ ಕಷಾಯ

ಶೀತ, ನೆಗಡಿ, ಗಂಟಲು ಹಾಗೂ ಕಫ ಬಾಧೆ.
ಶರೀರದ ಚಯಾಪಚಯ ಪ್ರಕಿಯೆ ಸುಧಾರಣೆ.
ಎಲ್ಲಾ ವಯಸ್ಸಿನವರಿಗೆ ಉಪಯುಕ್ತ.

AYUSH KWATH

ತಯಾರಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
SDM
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
ISO 9001:2015 & GMP CERTIFIED
Email: sdmaph@sdmayurvedacollegeudupi.in
Customer Care: +91 8970977513

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.